# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

ಸಂಪುಟ : VI ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ-ಮಾರ್ಚ್ 2022


**ಅಧ್ಯಕ್ಷರ ಮಾತು**



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ಕೃತಜ್ಞತೆಗಳು

### ರೂ.690 ಕೋಟಿ ಮೀರಿದ ಒಟ್ಟು ವ್ಯವಹಾರ

ದಿನಾಂಕ 31.03.2022ಕ್ಕೆ ರೂ.374 ಕೋಟಿ ಠೇವಣಿ ರೂ.316 ಕೋಟಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.690 ಕೋಟಿಯನ್ನು ಮೀರಿದೆ, ಇದನ್ನು 31.03.2021ಕ್ಕೆ ಹೋಲಿಸುವಾಗ ಒಟ್ಟು ವ್ಯವಹಾರದಲ್ಲಿ ರೂ.129 ಕೋಟಿ ಹೆಚ್ಚಳವಾಗಿದೆ (ಠೇವಣಿ ರೂ.65 ಕೋಟಿ ಮತ್ತು ಸಾಲ ರೂ.64 ಕೋಟಿ) ಶೇ.23 ಏರಿಕೆಯನ್ನು ಕಂಡಿದೆ. ಸ್ಥಾಪನೆಯ 28 ವರ್ಷಗಳಲ್ಲಿ ರೂ.690 ಕೋಟಿ ಮೀರಿದ ವ್ಯವಹಾರವನ್ನು ದಾಖಲಿಸಿದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಸಂಘವು 31.03.2022ಕ್ಕೆ ಸಾಧಿಸಿದ ಪ್ರಗತಿ ವಿವರದ ಪಕ್ಷಿನೋಟ ಈ ಕೆಳಗಿನಂತಿದೆ.**
**(ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)**

| ಕ್ರ. ಸಂ. | ಕಾರ್ಯ ವಿಭಾಗ | ಮಾರ್ಚ್ 2021ಕ್ಕೆ ಇದ್ದಂತೆ (ರೂ) | ಮಾರ್ಚ್ 2022ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.309 ಕೋಟಿ | ರೂ.374 ಕೋಟಿ | ರೂ.65 ಕೋಟಿ | 21% |
| 2 | ಸಾಲ ಮತ್ತು ಮುಂಗಡ | ರೂ.252 ಕೋಟಿ | ರೂ.316 ಕೋಟಿ | ರೂ.64 ಕೋಟಿ | 25% |
| 3 | ಒಟ್ಟು ವ್ಯವಹಾರ | ರೂ.561 ಕೋಟಿ | ರೂ.690 ಕೋಟಿ | ರೂ.129 ಕೋಟಿ | 23% |
| 4 | ನಿವ್ವಳ ಲಾಭ | ರೂ.7.33 ಕೋಟಿ | ರೂ.9.04 ಕೋಟಿ | ರೂ.1.71 ಕೋಟಿ | 23% |
| 5 | ಅನುತ್ಪಾದಕ ಆಸ್ತಿ (Absolute) | ರೂ.14 ಲಕ್ಷ | ರೂ.14 ಲಕ್ಷ | – | – |
| | ಶೇಕಡಾವಾರು | 0.06% | 0.05% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | – | – |

**I) ರೂ.374 ಕೋಟಿ ಠೇವಣಾತಿ ಸಂಗ್ರಹಣೆ**

ಠೇವಣಿಗಳ ಸಂಗ್ರಹಣೆಯಲ್ಲಿ ಸಂಘವು ತನ್ನ 25 ಶಾಖೆಗಳ ಮುಖಾಂತರ 2021-22ನೇ ಸಾಲಿನಲ್ಲಿ, 31.03.2022ಕ್ಕೆ ಒಟ್ಟು ರೂ.374 ಕೋಟಿ ರೂಪಾಯಿ ಠೇವಣಿ ಹೊಂದಿ ಕಳೆದ ಸಾಲಿಗಿಂತ ರೂ.65 ಕೋಟಿ ಹೆಚ್ಚಳದೊಂದಿಗೆ ಶೇ.21 ಏರಿಕೆ ಕಂಡಿದೆ.

**II) ರೂ.316 ಕೋಟಿ ಸಾಲ ಮತ್ತು ಮುಂಗಡ**

ಸಾಲ ನೀಡುವಿಕೆಯಲ್ಲಿರುವ ಸ್ಪರ್ಧಾತ್ಮಕತೆ ಮತ್ತು ಕೋವಿಡ್-19ರ ವಿಷಮ ಪರಿಸ್ಥಿತಿಯ ನಡುವೆಯೂ ಸಂಘದ ಹೊರಬಾಕಿ ಸಾಲವು 2021-22ನೇ ಸಾಲಿನಲ್ಲಿ 31.03.2022ಕ್ಕೆ ರೂ.316 ಕೋಟಿಯಷ್ಟಿದ್ದು ಕಳೆದ ಸಾಲಿಗಿಂತ ರೂ.64 ಕೋಟಿ ಹೆಚ್ಚಳದೊಂದಿಗೆ ಶೇ.25 ವೃದ್ಧಿಯಾಗಿದೆ.

**III) ರೂ.690 ಕೋಟಿ ಮೀರಿದ ಒಟ್ಟು ವ್ಯವಹಾರ**

ಆಧುನಿಕ ಸೌಲಭ್ಯಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು, ವರದಿ ವರ್ಷದಲ್ಲಿ 31.03.2022ಕ್ಕೆ ರೂ.690 ಕೋಟಿ ರೂಪಾಯಿಗಳ ಒಟ್ಟು ವ್ಯವಹಾರ (ರೂ.374 ಠೇವಣಾತಿ + ರೂ.316 ಸಾಲಗಳು) ದಾಖಲಿಸಿ ಅತ್ಯುತ್ತಮ ಪ್ರಗತಿ ದಾಖಲಿಸಿದೆ. ಕಳೆದ ಸಾಲಿಗೆ ಹೋಲಿಸಿದಾಗ ಒಟ್ಟು ವ್ಯವಹಾರದಲ್ಲಿ ಶೇ.23 ಏರಿಕೆಯನ್ನು ಕಂಡಿದೆ.

**IV) ರೂ.9.00 ಕೋಟಿ ಮೀರಿದ ದಾಖಲೆಯ ನಿವ್ವಳ ಲಾಭ**

28 ವರ್ಷಗಳ ಸಾರ್ಥಕ ಸೇವೆಯನ್ನು ಸಹಕಾರಿ ಹಣಕಾಸು ಕ್ಷೇತ್ರದಲ್ಲಿ ನೀಡುತ್ತಿರುವ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ 2021–22ನೇ ಸಾಲಿನಲ್ಲಿ ಅಮೋಘ ಸಾಧನೆಗೈದು, ದಿನಾಂಕ 31.03.2022ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ ರೂ.2250 ಕೋಟಿಗೂ ಮೀರಿದ ವಹಿವಾಟು ನಡೆಸಿ, ರೂ.9.04 ಕೋಟಿಗೆ ಮೀರಿದ ನಿವ್ವಳ ಲಾಭ ಗಳಿಸಿದೆ. ಇದು ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆಯಾಗಿದೆ. ಸಂಘದ ನಿವ್ವಳ ಲಾಭವು ಪ್ರತಿವರ್ಷವೂ ಗಣನೀಯ ಏರಿಕೆಯನ್ನು ಕಾಣುತ್ತಿದ್ದು ಹಿಂದಿನ ಸಾಲಿಗೆ ಹೋಲಿಸಿದಾಗ ರೂ.1.71 ಕೋಟಿ ಹೆಚ್ಚಳವನ್ನು ಕಂಡಿದ್ದು, ಶೇ.23 ರಷ್ಟು ವೃದ್ಧಿಯಾಗಿದೆ.

**V) ಕಳೆದ 14 ವರ್ಷಗಳಿಂದ ಶೂನ್ಯ ನಿವ್ವಳ ಅನುತ್ಪಾದಕ ಆಸ್ತಿ (Zero Net NPA)**

31.03.2022ಕ್ಕೆ ಸಂಘದ Gross ಅನುತ್ಪಾದಕ ಆಸ್ತಿ (Gross NPA) ರೂ.14 ಲಕ್ಷದಷ್ಟಿದ್ದು ಇದು ಹೊರಬಾಕಿ ಸಾಲದ 0.05% (ಪ್ರತಿ ನೂರು ರೂಪಾಯಿಗೆ 5 ಪೈಸೆಯಷ್ಟು ಮಾತ್ರ)ಕ್ಕೆ ಸೀಮಿತವಾಗಿರುತ್ತದೆ. ಹಾಗೂ ಕಳೆದ 15 ವರ್ಷಗಳಿಂದ ಅಂದರೆ 2007–08ನೇ ಸಾಲಿನಿಂದ ಈವರೆಗೆ ಸಂಘದ ನಿವ್ವಳ ಅನುತ್ಪಾದಕ ಆಸ್ತಿ (Net NPA)ಯು ಹೊರಬಾಕಿ ಸಾಲದ ಶೂನ್ಯ ಪ್ರಮಾಣದಲ್ಲಿರುತ್ತದೆ.

**VI) ಒಟ್ಟು 25 ಶಾಖೆಗಳು**

2021ರ ನವೆಂಬರ್ ತಿಂಗಳ ಮೊದಲ ವಾರದ ಅವಧಿಯಲ್ಲಿ 5 ನೂತನ ಶಾಖೆಗಳನ್ನು ಆರಂಭಿಸಿ, ಕ್ರೆಡಿಟ್ ಸಹಕಾರ ರಂಗದಲ್ಲಿ ಅಪೂರ್ವ ಸಾಧನೆಯೊಂದಿಗೆ, ಸಂಘದ ಶಾಖೆಗಳ ಸಂಖ್ಯೆ 25ಕ್ಕೆ ಏರಿಕೆ.

**VII) ಸಾಧನೆ**

- 4 ಬಾರಿ ರಾಜ್ಯ ಮಟ್ಟದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ.
- ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ 10 ಬಾರಿ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ.
- 31.03.2022ಕ್ಕೆ ರೂ.690 ಕೋಟಿ ಒಟ್ಟು ವ್ಯವಹಾರ (ಠೇವಣಿ ರೂ.374 ಕೋಟಿ + ಸಾಲ ರೂ.316 ಕೋಟಿ) 2021–22ನೇ ಸಾಲಿನಲ್ಲಿ ರೂ.129 ಕೋಟಿ (ಠೇವಣಿ ರೂ.65 ಕೋಟಿ + ಸಾಲ ರೂ.64 ಕೋಟಿ) ಒಟ್ಟು ವ್ಯವಹಾರದಲ್ಲಿ ಹೆಚ್ಚಳ.
- ಒಟ್ಟು ಅನುತ್ಪಾದಕ ಆಸ್ತಿ (Gross NPA) ಹೊರಬಾಕಿ ಸಾಲದ ಶೇ.0.05ಕ್ಕೆ ಸೀಮಿತ.
- ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣ [Net NPA 0%].
- ಸಂಘದ 14 ಶಾಖೆಗಳು ಸಂಪೂರ್ಣ ಹವಾನಿಯಂತ್ರಿತವಾಗಿ ಕಾರ್ಯನಿರ್ವಹಿಸುತ್ತಿದೆ.
- ಸಂಘದ ಸ್ವಂತ ನಿವೇಶನದಲ್ಲಿ ಕೇಂದ್ರ ಕಛೇರಿಗೆ ಕಟ್ಟಡ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ.
- ಸಂಘದ ಎಲ್ಲಾ ಶಾಖೆಗಳ ಭದ್ರತೆಯ ಹಿತದೃಷ್ಟಿಯಿಂದ ಎಲ್ಲಾ ಶಾಖೆಯಲ್ಲಿ Strong Roomನ್ನು ಹೊಂದಲಾಗಿದ್ದು ಸಿಸಿ ಟಿವಿ ಕೆಮರಾ ಅಳವಡಿಸಲಾಗಿದೆ.
- ಸಂಘದ ಕಾರ್ಯವ್ಯಾಪ್ತಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ 25 ಶಾಖೆಗಳನ್ನು ಹೊಂದಿದೆ.
- ಸಂಘದ ಸದಸ್ಯರಿಗೆ ಶೇ.25 ಡಿವಿಡೆಂಡ್ ನೀಡಿಕೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಜಿಲ್ಲೆಯ ಕ್ಷಯ ರೋಗಿಗಳಿಗೆ ಪೌಷ್ಠಿಕ ಆಹಾರ ಒದಗಿಸಲು ಸಂಘದ ವತಿಯಿಂದ ಧನ ಸಹಾಯ



ದಕ್ಷಿಣ ಕನ್ನಡ ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿಗಳ ಮನವಿಯನ್ನು ಪರಿಗಣಿಸಿ ಜಿಲ್ಲೆಯ ಕ್ಷಯ ರೋಗಿಗಳಿಗೆ ಪೌಷ್ಠಿಕ ಆಹಾರ ಒದಗಿಸಲು ಸಂಘದ ವತಿಯಿಂದ ಧನ ಸಹಾಯವನ್ನು ಒದಗಿಸಿರುತ್ತದೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನ ಕಾರ್ಯಕ್ರಮ 16.02.2022ರಂದು ಬುಧವಾರ ಜರಗಿದ್ದು, ಈ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ ರೈಯವರು ಹಾಗೂ ದ.ಕ. ಜಿಲ್ಲಾ ಆರೋಗ್ಯಾಧಿಕಾರಿ ಡಾ| ಕಿಶೋರ್ ಕುಮಾರ್, ಡಾ| ದೇವಿಗನ್ ಸಿ. ಮತ್ತು ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ| ಬದ್ರುದ್ದೀನ್ ಎಂ.ಎನ್. ಮುಂತಾದವರು ಉಪಸ್ಥಿತರಿದ್ದರು.



# ಸಂಘದ ಮುಡಿಪು ಶಾಖೆಯ ನೂತನ ಶಾಖಾ ಕಛೇರಿ ಉದ್ಘಾಟನೆ

**ಕಳೆದ 28 ವರುಷಗಳಲ್ಲಿ ಹಂತ ಹಂತವಾಗಿ ಬ್ಯಾಂಕ್‌ನ ಠೇವಣಿ ಹೆಚ್ಚಳವಾಗುವುದರೊಂದಿಗೆ ಲಾಭಾಂಶದಲ್ಲಿಯೂ ಹೆಚ್ಚಳವಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ಠೇವಣಿದಾರರಿಗೆ ಶೇ.25 ಡಿವಿಡೆಂಡ್ ನೀಡುವ ಜಿಲ್ಲೆಯ ಸಹಕಾರ ಸಂಘಗಳಲ್ಲಿ ಅಗ್ರಸ್ಥಾನದಲ್ಲಿದೆ.**

**ಡಾ| ಎಂ.ಎನ್. ರಾಜೇಂದ್ರ ಕುಮಾರ್**

ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. ಮಂಗಳೂರು
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ. ಬೆಂಗಳೂರು

ಅಡಿಪಾಯ ಭದ್ರವಾಗಿದ್ದರೆ ಆ ಸಂಸ್ಥೆ ಎತ್ತರಕ್ಕೆ ಬೆಳೆಯಲು ಸಾಧ್ಯ ಎನ್ನುವುದಕ್ಕೆ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಉದಾಹರಣೆಯಾಗಿದ್ದು, 28 ವರ್ಷಗಳ ಹಿಂದೆ ಶ್ರೀ ಕೆ.ಬಿ. ಜಯಪಾಲ ಶೆಟ್ಟಿ ಅವರು ಹಾಕಿದ ಭದ್ರ ಬುನಾದಿ ಇಂದು ಸಂಸ್ಥೆ ಉತ್ತುಂಗಕ್ಕೆ ಬೆಳೆಯಲು ಸಾಧ್ಯವಾಗಿದೆ. ಈಗಿನ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ರವರ ಅವಧಿಯಲ್ಲಿ ಜನರ ಬಳಿಗೆ ಬ್ಯಾಂಕಿಂಗ್ ಸೇವೆ ಮಾಡುವ ಮೂಲಕ ಜನರ ಸಂಸ್ಥೆಯಾಗಿ ರೂಪುಗೊಳ್ಳುತ್ತಿದೆ ಎಂದು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಬೆಂಗಳೂರು ಇದರ ಅಧ್ಯಕ್ಷ ಡಾ| ಎಂ.ಎನ್. ರಾಜೇಂದ್ರ ಕುಮಾರ್ ಅಭಿಪ್ರಾಯಪಟ್ಟರು.

ಅವರು ಮುಡಿಪು ಜಂಕ್ಷನ್‌ನಲ್ಲಿರುವ ವಿಶ್ವಕರ್ಮ ಸಮುದಾಯ ಭವನದ ನೆಲ ಮಹಡಿಯಲ್ಲಿ ಮಂಗಳೂರಿನ ಬಂಟ್ಸ್ ಹಾಸ್ಟೆಲ್ ವೃತ್ತದ ಅಮೃತ ಮಹೋತ್ಸವ ಕಟ್ಟಡದಲ್ಲಿ ಕೇಂದ್ರ ಕಛೇರಿ ಹೊಂದಿರುವ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಮುಡಿಪು ಶಾಖೆಯ ನೂತನ ಕಛೇರಿಯನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ ಅಧ್ಯಕ್ಷ ಕೆ. ಜೈರಾಜ್ ಬಿ. ರೈ ಮಾತನಾಡಿ, ಕಳೆದ 28 ವರುಷಗಳಲ್ಲಿ ಸಂಸ್ಥೆಯ ಆಡಳಿತ ಮಂಡಳಿ, ಸಿಬ್ಬಂದಿಗಳ ಮತ್ತು ಗ್ರಾಹಕರ ಬೆಂಬಲದೊಂದಿಗೆ ಸಂಸ್ಥೆ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿದ್ದು ಈ ಸಂಸ್ಥೆ 30 ವರುಷಗಳನ್ನು ಪೂರೈಸುವ ಸಂದರ್ಭ 30 ಶಾಖೆಗಳನ್ನು ತೆರೆಯುವ ಗುರಿಯೊಂದಿಗೆ ಒಂದು ಸಾವಿರ ಕೋಟಿ ವ್ಯವಹಾರ, 10 ಕೋಟಿಗೂ ಮಿಕ್ಕಿ ಲಾಭದ ನಿರೀಕ್ಷೆಯಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳು ನೀಡುವ ಸೇವೆಯನ್ನು ಗ್ರಾಹಕರಿಗೆ ನೀಡುವ ಉದ್ದೇಶ ಹೊಂದಿದೆ. 2023ರಲ್ಲಿ ಸೊಸೈಟಿಯ ನೂತನ ಕಟ್ಟಡ ಉದ್ಘಾಟನೆಗೊಳ್ಳಲಿದೆ ಎಂದರು.

ಮುಡುಪುವಿನ ಅಮ್ಮೆಂಬಳ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಟಿ.ಜಿ. ರಾಜಾರಾಮ ಭಟ್, ಕುರ್ನಾಡು ಗ್ರಾ.ಪಂ. ಅಧ್ಯಕ್ಷ ಕೆ. ಗಣೇಶ್ ನಾಯ್ಕ್, ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಮುಡಿಪು ವಿಶ್ವಕರ್ಮ ಸಂಘದ ಅಧ್ಯಕ್ಷ ಇರಾ ಯೋಗೀಶ್ ಆಚಾರ್ಯ ಅತಿಥಿಗಳಾಗಿದ್ದರು. ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಉಪಾಧ್ಯಕ್ಷೆ ಲಕ್ಷ್ಮೀ ಜಯಪಾಲ ಶೆಟ್ಟಿ, ನಿರ್ದೇಶಕರಾದ ಪಿ. ಶಿವರಾಮ ಅಡ್ಯಂತಾಯ, ಕುಂಬ್ರ ದಯಾಕರ್ ಆಳ್ವ, ಡಾ| ಎಂ. ಸುಧಾಕರ ಶೆಟ್ಟಿ, ಅರಿಯಡ್ಕ ಚಿಕ್ಕಪ್ಪ ನ್ಯಾಕ್, ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ., ಶಾಖಾ ಪ್ರಬಂಧಕ ತಿಮ್ಮಯ್ಯ ಶೆಟ್ಟಿ ಉಪಸ್ಥಿತರಿದ್ದರು.

ನಿರ್ದೇಶಕ ಪಿ.ಬಿ. ದಿವಾಕರ ರೈ ಸ್ವಾಗತಿಸಿ, ರಾಮಕೃಷ್ಣ ಪ್ರೌಢಶಾಲೆ ನಿವೃತ್ತ ಮುಖ್ಯ ಶಿಕ್ಷಕ ರವೀಂದ್ರ ರೈ ಕಲ್ಲಿಮಾರು ಕಾರ್ಯಕ್ರಮ ನಿರೂಪಿಸಿದರು. ನಿರ್ದೇಶಕ ಯಂ. ರಾಮಯ ಶೆಟ್ಟಿ ವಂದಿಸಿದರು.

## ಡಾ| ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ಶುಭಾಶಯ

ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಸನ್ಮಾನ್ಯ ಡಾ| ಎಂ.ಎನ್. ರಾಜೇಂದ್ರ ಕುಮಾರ್‌ರವರ 73ನೇ ಹುಟ್ಟು ಹಬ್ಬದ ಅಭಿವಂದನಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಅವರಿಗೆ ಹೂಗುಚ್ಛವನ್ನು ನೀಡಿ ಶುಭಾಶಯ ಸಲ್ಲಿಸಿದರು.



## ಸೈಂಟ್ ಜೋಕಿಮ್ಸ್ ಚರ್ಚ್ ಕಡಬ ಕನ್ನಡ ಮಾಧ್ಯಮ ಪೌಢ ಶಾಲೆಗೆ ಸಂಘದ ವತಿಯಿಂದ ಕಂಪ್ಯೂಟರ್ ಹಸ್ತಾಂತರ



ಸೈಂಟ್ ಜೋಕಿಮ್ಸ್ ಚರ್ಚ್ ಕಡಬ, ಇವರ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗೆ ಸಂಘದ ವತಿಯಿಂದ ಕಂಪ್ಯೂಟರ್ ಖರೀದಿಗೆ ದೇಣಿಗೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಚರ್ಚ್‌ನ ಧರ್ಮಗುರುಗಳಾದ ರೆ|ಫಾ| ಅರುಣ್ ವಿಲ್ಸನ್ ಲೋಬೋರವರಿಗೆ ಹಸ್ತಾಂತರಿಸಿದರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕಿ, ವಿದ್ಯಾರ್ಥಿ ಜೀವನದ ಅನುಭವಗಳನ್ನು ಮಕ್ಕಳ ಮುಂದೆ ಹಂಚಿಕೊಂಡರು. ಹಿಂದಿನ ಹಾಗೂ ಈಗಿನ ಕಲಿಕಾ ಪರಿಸ್ಥಿತಿಯನ್ನು ವಿವರಿಸಿದರು. ಮಕ್ಕಳು ದೇಶದ ಆಸ್ತಿಯಾಗಿದ್ದು, ಉತ್ತಮವಾಗಿ ಓದಿ ಮನೆಗೆ, ಕಲಿತ ಶಾಲೆಗೆ ಹಾಗೂ ದೇಶಕ್ಕೆ ಹೆಸರು ತಂದು ಸತ್ಪ್ರಜೆಗಳಾಗಿ ಬಾಳುವಂತೆ ಮಕ್ಕಳಿಗೆ ತಿಳಿ ಹೇಳಿದರು. ಆ ಸಂದರ್ಭದಲ್ಲಿ ನಿರ್ದೇಶಕರಾದ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶ್ರೀಲತಾ ಹಾಗೂ ಕಡಬ ಶಾಖಾಧಿಕಾರಿ ಶ್ರೀ ದಿನೇಶ್ ಶೆಟ್ಟಿ ಉಪಸ್ಥಿತರಿದ್ದರು.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು | ಮತ್ತು ಶಾಖೆ |
|---|---|
| ಕು. ಅಶ್ವಿತಾ ಎಂ. | ಕಡಬ |
| ಶ್ರೀ ಕರುಣಾಕರ್ ಶೆಟ್ಟಿ | ಸುಳ್ಯ |
| ಶ್ರೀಮತಿ ನಿರ್ಮಲ ಶೆಟ್ಟಿ | ಮೂಡಬಿದ್ರಿ |
| ಕು. ಲಾವಣ್ಯ | ಉಡುಪಿ ಸಿಟಿ |
| ಶ್ರೀಮತಿ ತುಳಸಿ | ಸುರತ್ಕಲ್ |
| ಶ್ರೀ ಗಣೇಶ್ ಜಿ.ಕೆ. | ಕೇಂದ್ರ ಕಛೇರಿ |
| ಶ್ರೀಮತಿ ಅಕ್ಷತ ಕುಮಾರಿ | ಬಿ.ಸಿ.ರೋಡ್ |
| ಶ್ರೀಮತಿ ಶ್ರೀಲತಾ ಶೆಟ್ಟಿ | ಬೈಂದೂರು |
| ಕು. ಶ್ರುತಿ ಕೆ. | ಬಿ.ಸಿ.ರೋಡ್ |
| ಶ್ರೀ ಸೇಸಪ್ಪ ನ್ಯಾಕ್ | ಸುಳ್ಯ |
| ಶ್ರೀ ಸೂರಜ್ ಭಂಡಾರಿ | ಸುರತ್ಕಲ್ |
| ಶ್ರೀ ಕುಂಞ | ಬೆಳ್ತಂಗಡಿ |
| ಶ್ರೀ ಬಾಲಕೃಷ್ಣ ರೈ | ವಿಟ್ಲ |
| ಶ್ರೀ ಮಹಾಬಲ ಶೆಟ್ಟಿ | ಮಂಗಳೂರು |
| ಶ್ರೀ ಶಮಿತ್ ಕುಮಾರ್ | ಮಂಗಳೂರು |
| ಶ್ರೀ ರಮೇಶ್ ಪಿ | ವಿಟ್ಲ |
| ಶ್ರೀ ಮೋಹನ್‌ದಾಸ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಉಷಾ ಬಿ. | ಉಪ್ಪಿನಂಗಡಿ |
| ಶ್ರೀಮತಿ ಜ್ಯೋತಿ | ಕೇಂದ್ರ ಕಛೇರಿ |
| ಶ್ರೀ ನವೀನ್ ಕುಮಾರ್ | ಕಾರ್ಕಳ |
| ಶ್ರೀ ಶ್ರೀಹರ್ಷ ಡಿಎಸ್. | ಬಿ.ಸಿ.ರೋಡ್ |
| ಶ್ರೀ ನಾಗರಾಜ್ ಎಚ್. | ಬೈಂದೂರು |
| ಶ್ರೀಮತಿ ಮಿಸ್ರಿಯ ಪಿ.ಐ. | ಉಪ್ಪಿನಂಗಡಿ |
| ಶ್ರೀಮತಿ ಉಷಾ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಜಯಂತಿ ಖಾರ್ವಿ | ಕುಂದಾಪುರ |
| ಶ್ರೀ ಮೋಹನ್‌ದಾಸ್ ಶೆಟ್ಟಿ | ಉಪ್ಪಿನಂಗಡಿ |
| ಶ್ರೀ ಭರತ್ ಎಸ್. | ಶಿರ್ವ |
| ಶ್ರೀ ನಾಗರಾಜ್ | ಕುಂದಾಪುರ |
| ಶ್ರೀಮತಿ ಅನಿತಾ ಎ. | ವೆಲೆನ್ಸೀಯಾ |
| ಶ್ರೀ ಹರೀಶ್ ಮೂಲ್ಯ | ಬಿ.ಸಿ.ರೋಡ್ |
| ಶ್ರೀ ರಾಘವೇಂದ್ರ ರಾವ್ | ಉಡುಪಿ ಸಿಟಿ |

## 'ಸಹಕಾರ ರತ್ನ' ಕೆ. ಸೀತಾರಾಮ ರೈ ಸವಣೂರುರವರಿಗೆ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಸಂಘದ ವತಿಯಿಂದ ಸನ್ಮಾನ



ಕರ್ನಾಟಕ ರಾಜ್ಯ ಸರಕಾರವು ನೀಡುವ ಪ್ರತಿಷ್ಠಿತ 'ಸಹಕಾರ ರತ್ನ ಪ್ರಶಸ್ತಿ' ಪುರಸ್ಕೃತರಾದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ ಹಿರಿಯ ನಿರ್ದೇಶಕರಾದ ಕೆ. ಸೀತಾರಾಮ ರೈ ಸವಣೂರುರವರನ್ನು ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈಯವರು ನಿರ್ದೇಶಕರೊಡಗೂಡಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಯಂ. ರಾಮಯ ಶೆಟ್ಟಿ ಹಾಗೂ ಪಿ.ಬಿ. ದಿವಾಕರ ರೈಯವರು ಮಾತನಾಡಿ, ಕೆ. ಸೀತಾರಾಮ ರೈ ಸವಣೂರುರವರು 50 ಕ್ಕೂ ಮೀರಿದ ವರ್ಷಗಳಿಂದ ಸಹಕಾರ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಕೊಡುಗೆಯನ್ನು ಕೊಂಡಾಡಿದರು. ಸಂಘದ ನಿರ್ದೇಶಕರುಗಳಾದ ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಪಿ. ಶಿವರಾಮ ಅಡ್ಯಂತಾಯ, ಸಿ.ಎ. ಎಚ್.ಆರ್. ಶೆಟ್ಟಿ, ವಿಠಲ ಪಿ. ಶೆಟ್ಟಿ, ಅರುಣ್ ಕುಮಾರ್ ಶೆಟ್ಟಿ, ರವೀಂದ್ರ ನಾಥ ಜಿ. ಹೆಗ್ಡೆ, ಕುಂಬ್ರ ದಯಾಕರ್ ಆಳ್ವ, ಡಾ। ಎಂ. ಸುಧಾಕರ ಶೆಟ್ಟಿ ಮತ್ತು ಅರಿಯಡ್ಕ ಚಿಕ್ಕಪ್ಪ ನ್ಯಾಕ್, ಪ್ರಭಾರ ಮಹಾಪ್ರಬಂಧಕರಾದ ಗಣೇಶ್ ಜಿ.ಕೆ. ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



## ಸಂಘದ ಸರ್ವ ಸಿಬ್ಬಂದಿ ಸಮಾವೇಶ

ದಿನಾಂಕ 06.03.2022ರಂದು ಸಂಘದ ಸರ್ವ ಸಿಬ್ಬಂದಿ ಸಮಾವೇಶವು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ನಿರ್ದೇಶಕರುಗಳು, ಪ್ರಭಾರ ಮಹಾಪ್ರಬಂಧಕರು ಹಾಗೂ ಸರ್ವ ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಅಭಿನಂದನೆಗಳು

- ಸಂಘದ ತೊಕ್ಕೊಟ್ಟು ಶಾಖೆಯ ಸಿಬ್ಬಂದಿ ಶ್ರೀ ಅಮಿತ್ ಕುಮಾರ್‌ರವರು ಹೆಣ್ಣು ಮಗುವಿನ ತಂದೆಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಸುರತ್ಕಲ್ ಶಾಖೆಯ ಸಿಬ್ಬಂದಿ ಶ್ರೀಮತಿ ಶ್ರೀಲಕ್ಷ್ಮಿರವರು ಹೆಣ್ಣು ಮಗುವಿನ ತಾಯಿಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.
- ಸಂಘದ ಕುಂದಾಪುರ ಶಾಖೆಯ ಸಿಬ್ಬಂದಿ ಚಿ। ನಾಗರಾಜ್‌ರವರ ವಿವಾಹವು ಚಿ।ಸೌ॥ ಆಶಾರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.